ಕೋಟೆಯ ಬುರುಜೇ ಕಾಣದಂಥ ಸ್ಥಿತಿ. ದಕ್ಷಿಣ ದಿಕ್ಕಿನಿಂದ ಪಶ್ಚಿಮ ದಿಕ್ಕಿನವರೆಗೂ ಒಂದು ತೆರೆಯ ಹಾಗೆ ಹರಡಿಕೊಂಡ ಬೂದುಬಣ್ಣದ ಮಂಜು ಎಲ್ಲ ದಿಕ್ಕುಗಳಿಗೂ ವ್ಯಾಪಿಸುತ್ತ ಕೋಟೆಗೆ ಕೋಟೆಯನ್ನೇ ನುಂಗಿಹಾಕಿತು. ಎದುರಿಗಿದ್ದವರು ಕಾಣುವುದು ಹಾಗಿರಲಿ, ಅವರ ಮಾತು ಕೂಡ ಕೇಳಿಸದಂತಾಯಿತು. ಕವಿದ ಬಾಲಕೃಷ್ಣ ಮುಖ ಒರೆಸಿಕೊಂಡಾಗ ಅವನ ಬೆರಳುಗಳಿಂದ ಹನಿಹನಿಯಾಗಿ ನೆಲಕ್ಕೆ ತೊಟ್ಟಿಕ್ಕಿತು ಇಬ್ಬನಿ. ಅವನು ಕಣ್ಣು ಮೂಗು ಬಾಯಿಗಳಿಗೆ ಮುತ್ತುತ್ತಿದ್ದ ಮಂಜಿನಲ್ಲಿ ಏನು ಮಾಡುವುದೆಂದು ತಿಳಿಯದೆ ತಡವರಿಸುತ್ತ ಹೆಜ್ಜೆ ಇಡುತ್ತಿದ್ದ. ಕೆಲವೇ ಕ್ಷಣಗಳ ನಂತರ ನಾಲ್ಕು ಹೆಜ್ಜೆಯಾಚೆಗೆ ಕೇಳಿಸಿದ ವಿಷಲ್ಲಿನ ಸದ್ದಿನಿಂದ ಸಿಸ್ಟರ್ ರೋಸಿ ಹತ್ತಿರದಲ್ಲೇ ಇದ್ದಾರೆನ್ನಿಸಿ ಸಮಾಧಾನವಾಯಿತು.

ಚಳಿಯಿಂದ ಮಕ್ಕಳೆಲ್ಲ ನಡುಗುತ್ತಿದ್ದರು. ಏನನ್ನಾದರೂ ಹೇಳಲು ಬಾಯಿ ತೆರೆದರೆ ಸಾಕು, ಬಾಯಿಯಿಂದ ಹೊಗೆಯ ಹಾಗೆ ಹೊರಬರುತ್ತಿತ್ತು ಹಬೆ. ಹೆಡ್‌ಮಾಸ್ಟರ್ ಗೇಬ್ರಿಯಲ್ ಚಿನ್ನಪ್ಪ, ಟೀಚರುಗಳನ್ನೆಲ್ಲ ಹತ್ತಿರ ಕರೆದು, ಏನೂ ಕಾಣಿಸ್ತಾ ಇಲ್ಲ ಸಿಸ್ಟರ್. ಇನ್ನು ಈ ಕೋಟೇನೇನು ತೋರಿಸೋದು ಮಕ್ಕಳಿಗೆ. ಮಳೆ ಬಂದರೂ ಬಂದೀತು. ಇವತ್ತು ಬೇಡ. ಇನ್ನೊಂದು ಸಲ ಬರೋಣ. ಈಗ ಎಲ್ಲ ಮಕ್ಕಳನ್ನೂ ಒಟ್ಟಿಗೆ ಸೇರಿಸಿ. ಊರಿಗೆ ಹೊರಟುಬಿಡೋಣ ಎಂದು ಹೇಳಿದರು. ಸಿಸ್ಟರ್ ರೋಸಿಯವರು ಅದಕ್ಕೇ ಕಾದಿದ್ದವರಂತೆ ಬನ್ನಿ ಮಕ್ಕಳೇ ಎಂದು ಕೂಗುತ್ತ, ಹತ್ತಿರ ಬಂದ ಮಕ್ಕಳಿಗೆ ತಮ್ಮ ಚೀಲದಿಂದ ಬಿಸ್ಕತ್ತಿನ ಪ್ಯಾಕೆಟ್ಟುಗಳನ್ನು ತೆಗೆದುಕೊಟ್ಟರು. ಕೆಲವೇ ಕ್ಷಣಗಳಲ್ಲಿ ಹಾರ್ನು ಕೂಗಿಕೊಂಡಿತು.

ಬಸ್ಸು ದೇವನಹಳ್ಳಿಯಿಂದ ಹಿಂತಿರುಗುತ್ತಾ ಇರುವಾಗ ಆ ಮಂಜಿನಲ್ಲೂ ಭುವನಗಿರಿಯ ಕೆರೆಯ ಬದಿಯಲ್ಲಿ ಒಂದು ಕಡೆ ಹೊಗೆಯೇಳುತ್ತಿತ್ತು. ಅದು ಬರುತ್ತ ಬರುತ್ತ ಮಂಜಿನಲ್ಲಿ ಕರಗಿಹೋಗುತ್ತಿರುವಾಗ ಮೂರು ನಾಲ್ಕು ಮಂದಿ ಏನೋ ಹೊತ್ತುಕೊಂಡು ಹೋಗುತ್ತಿರುವುದು ಮಸಕುಮಸಕಾಗಿ ಕಾಣಿಸಿತು. ಬಸ್ಸು ಸ್ವಲ್ಪ ದೂರ ಹೋಗಿ ಬಲಕ್ಕೆ ತಿರುಗಿದ್ದೇ ಸ್ವಲ್ಪ ತಿಳಿಯಾದ ಮಂಜು ಅವರೊಂದು ಚಟ್ಟ ಹೊತ್ತಿರುವುದನ್ನು ತೋರಿಸಿತು. ಅವರು ಭಾರ ತಡೆಯಲಾಗದೆಂದೋ ಏನೋ, ತತ್ತರಿಸುತ್ತಿರುವಂತೆ ಹೆಜ್ಜೆ ಹಾಕುತ್ತ ಕ್ಷಣಾರ್ಧದಲ್ಲಿ ಕಣ್ಮರೆಯಾದರು. ಆಮೇಲೆ ಕಾಣಿಸಿದ್ದು ಕೈಯಲ್ಲೊಂದು ಹೊಗೆಯಾಡುತ್ತಿದ್ದ ಮಡಕೆ ಹಿಡಿದುಕೊಂಡು ಅವರನ್ನು ಹಿಂಬಾಲಿಸುತ್ತಿದ್ದ, ಬರಿ ಪಂಚೆಯಲ್ಲಷ್ಟೇ ಇದ್ದ ವಯಸ್ಸಾದವರೊಬ್ಬರು. ಅವರ ಹಿಂದೆ ಇನ್ನೂ ಅಷ್ಟು ಜನ ತಲೆ ಕೆಳಗೆ ಹಾಕಿಕೊಂಡು ಹೋಗುತ್ತಿದ್ದರು. ಕೆಲವೇ ಕ್ಷಣಗಳಷ್ಟೆ. ಆಮೇಲೆ ನೋಡುನೋಡುತ್ತಿರುವ ಹಾಗೆಯೇ ಅವರೆಲ್ಲರೂ ಮಂಜಿನಲ್ಲಿ ಕಾಣದಾದರು. ಡ್ರೈವರ್ ಬಸ್ಸಿನ ವೇಗವನ್ನು ತಗ್ಗಿಸಿ ಕವಿದ ಮಂಜನ್ನೇ ನೋಡುತ್ತ ಪಾಪ, ಇನ್ನೂ ಬದುಕಬೇಕಾಗಿದ್ದ ಹುಡುಗ, ಲೊಚ್ ಲೊಚ್ ಎನ್ನುವುದಕ್ಕೂ ಪ್ರದ್ಯುಮ್ನ ಟೀಚರ್ ಅವನ ಮುಂದೆ ಒಂದು ಬಿಸ್ಕತ್ತಿನ ಪ್ಯಾಕೆಟ್ ಹಿಡಿಯುವುದಕ್ಕೂ ಸರಿಹೋಯಿತು.

ಹತ್ತಾರು ನಿಮಿಷ ಕಳೆದಿರಬೇಕು. ಬಸ್ಸು ಕಾನ್ವೆಂಟಿನ ಅಂಗಳವನ್ನು ಪ್ರವೇಶಿಸಿದಾಗ ಬೆಳಗಿನಿಂದಲೂ ಮುತ್ತಿಕೊಂಡಿದ್ದ ಮಂಜು ಮೆಲ್ಲಮೆಲ್ಲಗೆ ಕರಗುತ್ತ ಬಿಸಿಲಿಗೆ ದಾರಿಮಾಡಿಕೊಡುತ್ತಿತ್ತು. ಗೇಬ್ರಿಯಲ್ ಚಿನ್ನಪ್ಪ ಬಸ್ಸಿನ ಬಾಗಿಲು ತೆರೆದು ಕೆಳಗಿಳಿದದ್ದೇ ಟೀಚರುಗಳೆಲ್ಲ ಗಡಿಬಿಡಿಯಿಂದ ತಮ್ಮ ಸೀಟುಗಳನ್ನು ಬಿಟ್ಟು ಮೇಲೆದ್ದವರು ಇಡೀ ಬಸ್ಸಿನಲ್ಲಿ ಕಣ್ಣಾಡಿಸಿ, ಒಬ್ಬೊಬ್ಬರೇ ಇಳಿಯಿರಿ ಮಕ್ಕಳೇ, ಹುಷಾರು ಹುಷಾರು ಎಂದರು. ಮೂರು ನಾಲ್ಕು ನಿಮಿಷಗಳಲ್ಲೇ ಬಸ್ಸಿನಿಂದ ಕೆಳಗಿಳಿದ ಮಕ್ಕಳು ಕೇಕೆ ಹಾಕುತ್ತ ಗುಡ್ ಆಫ್ಟರ್‌ನೂನ್ ಮಿಸ್ ಎಂದು ಕೂಗಿಕೊಳ್ಳುತ್ತಿರುವಾಗ ಕೊನೆಯದಾಗಿ ಇಳಿದ ಸಿಸ್ಟರ್ ರೋಸಿ ದುಡುದುಡು ನಡೆದುಕೊಂಡು ಹೋಗಿ ಕಾನ್ವೆಂಟಿನ ಮುಂಭಾಗದ ಮೆಟ್ಟಿಲುಗಳನ್ನು ಹತ್ತಿದವರೇ, ಇನ್ನು ಮುಂದೆ ಹೆಜ್ಜೆಯಿಡಲಾಗದೆನ್ನುವಂತೆ ಅಲ್ಲೇ ಮೊಗಸಾಲೆಯ ಕಂಬಕ್ಕೆ ಒರಗಿಬಿಟ್ಟರು. ಬಾಲಕೃಷ್ಣ ಕ್ಲಾಸ್‌ರೂಮಿನಲ್ಲಿದ್ದ ತನ್ನ ಚೀಲವನ್ನು ತೆಗೆದುಕೊಂಡು ಬರುವ ಹೊತ್ತಿಗೆ ಅವರ ಮುಖ ಕಪ್ಪಿಟ್ಟಿತ್ತು. ಅವನು ಮಿಸ್ ಎಂದು ಕರೆದದ್ದೇ ತಡ, ಅವರು ಕರ್ಚೀಫನ್ನು ಬಾಯಿಗಿಟ್ಟುಕೊಂಡು ಎಲ್ಲರಿಗೂ ಕೇಳಿಸುವಂತೆಯೇ ಗಳಗಳನೆ ಅತ್ತುಬಿಟ್ಟರು.

ಬಾಲಕೃಷ್ಣ ಮನೆ ತಲಪಿದ ಮೇಲೆ ಅವನ ಅಮ್ಮ ಮೊದಲು ಕೇಳಿದ ಪ್ರಶ್ನೆ: ಇವತ್ತು ರೋಸಿ ಮಿಸ್ಸು ಬಂದಿದ್ರೇನೋ ಸ್ಕೂಲಿಗೆ?

●